



# ಶ್ರೀಮಾತೆ ಶಾರದಾದೇವಿ


ಕಥೆ : ಸ್ವಾಮಿ ವಿಮೂರ್ತಾನಂದ ಭಾಗ-೨ ಚಿತ್ರ : ಮಣಿಸೆಲ್ವನ್




ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಮರಳಿ ಬಂದ ಮೇಲೆ ಬೇಲೂರು ಮಠವನ್ನು ಸ್ಥಾಪಿಸಿದರು. ಆ ಸಂದರ್ಭದಲ್ಲಿ ಶ್ರೀಮಾತೆಯವರು ಅವರನ್ನು ಆಶೀರ್ವದಿಸಿದರು.
ನರೇನ್, ನೀನು ಜಗತ್ತಿಗೆ ಅತ್ಯುನ್ನತವಾದ ಆಧ್ಯಾತ್ಮಿಕ ಸೇವೆ ಮಾಡುತ್ತಿರುವೆ. ಈ ಸ್ಥಾನದಲ್ಲಿ ಸಂಕಟಕ್ಕೊಳಗಾದ ಅನೇಕ ಜೀವಗಳು ಶಾಂತಿಯನ್ನು ಪಡೆಯುವವು. ಭಗವಂತ ನಿನ್ನ ಮೇಲೆ ಕೃಪೆ ತೋರಲಿ!
ಸ್ವಾಮಿ ವಿವೇಕಾನಂದರಿಗೆ ಹಲವು ಮಂದಿ ಪಾಶ್ಚಿಮಾತ್ಯ ಶಿಷ್ಯಂದಿರಿದ್ದರು. ಶ್ರೀಮಾತೆ ಅವರನ್ನೆಲ್ಲ ಸ್ವೀಕರಿಸಿದರು. ಅವರನ್ನೆಲ್ಲ ತನ್ನವರನ್ನಾಗಿ ಮಾಡಿಕೊಂಡರು.
ಬನ್ನಿ, ನನ್ನ ಮಕ್ಕಳೇ, ನಿಮಗೆ ಸ್ವಾಗತ.
ಮಾತೆಯವರ ಪ್ರೀತಿಯ ಆಳ ಅಳೆಯಲಾಗದ್ದು.
ಅಮ್ಮಾ, ನಿಮ್ಮ ಆಶೀರ್ವಾದ ಪಡೆದ ನಾವು ಅದೃಷ್ಟವಂತರೇ ಸರಿ.
ಒಂದು ಸಲ ಒಬ್ಬ ಪೋಲೀಸನು ಸುಳ್ಳು ಆರೋಪ ಹೊರಿಸಿ, ಗರ್ಭಿಣಿ ಹೆಂಗಸೊಬ್ಬಳನ್ನು ಬಲವಂತವಾಗಿ ಬೀದಿಯಲ್ಲಿ ಎಳೆದುಕೊಂಡು ಹೋದ. ಶ್ರೀಮಾತೆಯವರಿಗೆ ಇದನ್ನು ಕೇಳಿ ಸಹಿಸಲಾಗಲಿಲ್ಲ. ...
ಏನು?? ಆ ಪೋಲೀಸನನ್ನು ತಡೆದು ಆಕೆಯನ್ನು ರಕ್ಷಿಸುವ ಒಬ್ಬ ಗಂಡಸೂ ಅಲ್ಲಿ ಇರಲಿಲ್ಲವೆ?
ಅನಂತರ ಆ ಹೆಂಗಸನ್ನು ಬಿಟ್ಟುಬಿಟ್ಟರು. ಆಗಷ್ಟೇ ಶ್ರೀಮಾತೆಗೆ ಸಮಾಧಾನವಾಯಿತು.


ಅಮ್‌ಜದ್ ಎಂಬ ಮುಸ್ಲಿಮ್ ಯುವಕ ನಿದ್ದ. ಬಡತನದಿಂದಾಗಿ ಅವನು ಸಣ್ಣಪುಟ್ಟ ಕಳ್ಳತನ ಮಾಡುತ್ತಿದ್ದ. ಆಗಾಗ ಅವನನ್ನು ಬಂಧಿಸಿ ಸೆರೆಮನೆಗೆ ಹಾಕುತ್ತಿದ್ದರು. ಆದರೆ ಅವನಿಗೆ ಶ್ರೀಮಾತೆಯವರ ಮೇಲೆ ಅಪಾರ ಭಕ್ತಿಯಿತ್ತು. ಸಮಯವಾದಾಗಲೆಲ್ಲ ಅವನು ಅವರನ್ನು ಭೇಟಿಯಾಗುತ್ತಿದ್ದ.
ಅಯ್ಯೋ, ನೀನೇನು ಮಾಡುತ್ತಿರುವೆ? ಮುಸಲ್ಮಾನರಿಗೆ ಈ ರೀತಿ ಉಪಚಾರ ಮಾಡಿದರೆ ನಮ್ಮನ್ನು ಜಾತಿಭ್ರಷ್ಟರನ್ನಾಗಿ ಮಾಡುತ್ತಾರೆ!
ಏನು? ನಾನು ಎಲ್ಲರ ತಾಯಿ. ಮಾತೃತ್ವದ ದೈವೀಭಾವವನ್ನು ಜಗತ್ತಿಗೆ ತೋರಿಸಿಕೊಡಲೆಂದೇ ನಾನು ಬಂದಿದ್ದೇನೆ. ನನ್ನ ಪಾಲಿಗೆ ಶರತ್ ಹಾಗೂ ಅಮ್‌ಜದ್ ಇಬ್ಬರೂ ಒಂದೇ. ಎಲ್ಲರೂ ನನ್ನ ಮಕ್ಕಳೇ.


1911ರಲ್ಲಿ ಸ್ವಾಮಿ ರಾಮಕೃಷ್ಣಾನಂದರು ಶ್ರೀಮಾತೆಯವರನ್ನು ದಕ್ಷಿಣ ಭಾರತಕ್ಕೆ ಕರೆದುಕೊಂಡು ಬಂದರು. ಶ್ರೀಮಾತೆ ತಮಿಳುನಾಡಿನ ದೇವಾಲಯಗಳಿಗೆ ಭೇಟಿ ಕೊಟ್ಟರು. ಇವುಗಳಲ್ಲಿ ಚೆನ್ನೈ ನಗರದ ಕಪಾಲೀಶ್ವರ ಮತ್ತು ಪಾರ್ಥಸಾರಥಿ ದೇವಾಲಯಗಳೂ ಸೇರಿವೆ.
ಶಿವ ಶಿವ! ಎಲ್ಲರನ್ನೂ ಕಾಪಾಡು.


ಅನಂತರ ಅವರು ರಾಮೇಶ್ವರಂಗೆ ಹೋದರು. ಅಲ್ಲಿ ಅವರು 108 ಬಿಲ್ವಪತ್ರೆಗಳು ಹಾಗೂ ಗಂಗಾಜಲದಿಂದ ದೇವರನ್ನು ಪೂಜಿಸಿದರು.
ನಾನು ಹಿಂದೆ ಹೇಗೆ ಇಟ್ಟಿದ್ದೆನೋ ಹಾಗೇ ಈ ರಾಮೇಶ್ವರ ಶಿವ ಈಗಲೂ ಇದೆ!

ಮುಂದೆ ಶ್ರೀಮಾತೆಯವರು ತಮ್ಮ ಗ್ರಾಮದಲ್ಲಿ ಸ್ಥಳೀಯರ ಉಪಯೋಗಕ್ಕೆಂದು ಒಂದು ಶಾಲೆ ಹಾಗೂ ಒಂದು ಅಣೆಕಟ್ಟನ್ನು ನಿರ್ಮಿಸಿದರು. ರಾಮಕೃಷ್ಣ ಮಹಾಸಂಘದಲ್ಲಿ ಎಲ್ಲ ವಿಷಯಗಳಲ್ಲೂ ಅವರ ಮಾತೇ ಅಂತಿಮವಾಯಿತು. ಅನೇಕ ಮಂದಿ ಸಂನ್ಯಾಸಿ ಹಾಗೂ ಗೃಹೀ ಭಕ್ತರು ಅಧ್ಯಾತ್ಮಿಕ ಮಾರ್ಗದರ್ಶನವನ್ನು ಕೋರಿ ಅವರ ಬಳಿಗೆ ಬರುತ್ತಿದ್ದರು. ಅಂತಿಮ ದಿನಗಳವರೆಗೂ ಶ್ರೀಮಾತೆ ಅವರಿಗೆಲ್ಲ ಆಧ್ಯಾತ್ಮಿಕ ಮಾರ್ಗದರ್ಶನ ನೀಡಿ, ಎಲ್ಲರಿಗೂ ಬಡಿಸಿ, ಊಟ ಮಾಡಿಸುತ್ತಿದ್ದರು. ಬಿಡುವಿಲ್ಲದ ಕೆಲಸಗಳ ಕಾರಣದಿಂದಾಗಿ ಅವರ ದೇಹ ಬಳಲಿ, ಅವರು ಕ್ಷೀಣಿಸತೊಡಗಿದರು.

ತಮ್ಮ ಕೊನೆಯ ದಿನಗಳಲ್ಲಿ ಅವರು ತಮ್ಮ ಆತ್ಮೀಯ ಸೇವಕಿಗೆ ಹೇಳಿದರು . . .




1920ರ ಜುಲೈ 20ರಂದು ಅವರು ದೇಹತ್ಯಾಗ ಮಾಡಿದರು. ಆದರೂ ಅವರ ದಿವ್ಯ ಸಾನ್ನಿಧ್ಯ ಇಂದಿಗೂ ಭಕ್ತರಿಗೆ ಮಾರ್ಗದರ್ಶನ ನೀಡುತ್ತಿದೆ.




''ನನಗೆ ವಿಶ್ರಾಂತಿಯಿಲ್ಲ. ನನ್ನ ಎಲ್ಲ ಭಕ್ತರ ಒಳಿತಿಗಾಗಿ ನಾನು ಕೆಲಸ ಮಾಡುತ್ತಲೇ ಇರುತ್ತೇನೆ. ನನ್ನ ಮರಣದ ನಂತರವೂ ನಾನು ಅವರ ಆಧ್ಯಾತ್ಮಿಕ ಕ್ಷೇಮದ ಜವಾಬ್ದಾರಿಯನ್ನು ಹೊತ್ತುಕೊಂಡು ಅವರನ್ನು ಕಾಪಾಡುತ್ತೇನೆ.''

– ಶ್ರೀಶಾರದಾದೇವಿ